**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 392/2022**

**ಚಾ.ಸಾ - 1**

**ಪ್ರಾ.ಸಾ - 1**

**ಸಾಕ್ಷಿಗೆ ದಿನಾಂಕ 07-11-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಲ್ಲೇಶಪ್ಪ |
| ತಂದೆಯ ಹೆಸರು | ಃ | ಯೋಗಪ್ಪ ಹೊಸ್ಮನಿ |
| ವಯಸ್ಸು | ಃ | 68 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಹಾಲಗಡ್ಲಾ |

**1 ಮತ್ತು 2ನೇ ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಆರೋಪಿತರು ಗೊತ್ತು. ನ್ಯಾಯಾಲಯದ ಮುಂದಿರುವ 3ನೇ ಆರೋಪಿ ಗೊತ್ತು. ಚಾಸಾ 2 ರಿಂದ 6 ಗೊತ್ತು. ಚಾಸಾ-6 ಓಗ್ಗೆಪ್ಪ ನನ್ನ ಮಗ.

ದಿನಾಂಕ 30-05-2021ರಂದು ಬೆಳಿಗ್ಗೆ 06-30 ರಿಂದ 06-45 ಗಂಟೆ ಸಮಯದಲ್ಲಿ ಕೆಲ್ಲೂರ ಸೀಮಾಂತರದಲ್ಲಿರುವ ಸ.ನಂ.104ರ ಜಮೀನಿನಲ್ಲಿ ಸದಿ ತೆಗೆಯುತ್ತಾ ಇದ್ದೆ. ಆಗ ಆರೋಪಿತರು ಟ್ರ್ಯಾಕ್ಟರ್ ತೆಗೆದುಕೊಂಡು ಬಂದು ಜಮೀನಿನ ಒಳಗೆ ಬಂದು ಜಮೀನಿನಲ್ಲಿದ್ದ 91 ಸಿಮೆಂಟ್ ಕಂಬಗಳನ್ನು ಟ್ರ್ಯಾಕ್ಟರಿನಿಂದ ಮುರಿದು ಹಾಕಿರುತ್ತಾರೆ. ಸದರಿ ಟ್ರ್ಯಾಕ್ಟರ್ ಹಳೆಯದಾಗಿದ್ದು ಅದಕ್ಕೆ ನೊಂದಣಿ ಫಲಕ ಇರಲಿಲ್ಲ. ಆರೋಪಿತರು ನನಗೆ ಹೊಡಿತಿನಿ ಬಡಿತಿನಿ ಅಂತಾ ಹೇಳುತ್ತಿದ್ದರು. ಆರೋಪಿತರು ತಾವು ಜಿಲ್ಲಾ ಅಧಿಕಾರಿಯಾಗಿದ್ದು ನಿನಗೆ ಹೊಡೆದು ಹೊಲದಲ್ಲಿ ಹೂತಾಕಿದರೂ ಯಾರೂ ಕೇಳಲ್ಲ ಅಂತಾ ಹೇಳಿರುತ್ತಾರೆ. ಆರೋಪಿತರು ನನೆಗ ಕೈಯಿಂದ ಹೊಡೆದು ಕಾಲಿನಿಂದ ಒದ್ದಿರುತ್ತಾರೆ. ಆಗ ನನ್ನ ಮಗ ಓಗೆಪ್ಪ ಅಲ್ಲಿಗೆ ಬಂದಿದ್ದು ಆ ನಂತರ ಆರೋಪಿತರು ಅಲ್ಲಿಂದ ಹೋಗಿರುತ್ತಾರೆ. ಆ ನಂತರ ನನ್ನ ಮಗ ನನ್ನನ್ನು ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನನಗೆ ನೋವು ಆಗುತ್ತಿದ್ದ ಕಾರಣ ಆಸ್ಪತ್ರೆಗೆ ಹೋಗಿರುತ್ತೇನೆ. ಆ ನಂತರ ಅದೇ ದಿನ ಕೇಸ್ ಮಾಡಿರುತ್ತೇನೆ. ಆರೋಪಿತರು ನನಗೆ ಹೊಡೆದು ಬಡಿದು ಬೈದು ದಬ್ಬಾಳಿಕೆ ಮಾಡಿ

ಅಂಜಿಕೆ ಹಾಕಿರುತ್ತಾರೆ.

ಆರೋಪಿತರು 91 ಕಂಬಗಳನ್ನು ಮುರಿದು ನನಗೆ ಸುಮಾರು ಒಂದೂವರೆ ಲಕ್ಷ ರೂಪಾಯಿ ನಷ್ಟವನ್ನುಂಟು ಮಾಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1ರಲ್ಲಿ ಬರೆದಂತಹ ವಿಚಾರಗಳು ನನಗೆ ಗೊತ್ತಿಲ್ಲ.

ಆರೋಪಿತರು ಕಂಬಗಳನ್ನು ಮುರಿಯಲು ಬಳಸಿದ ಟ್ರ್ಯಾಕ್ಟರ್ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ 4 ಛಾಯಾಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಪಿ-2 ರಿಂದ 5 ಎಂದು ಗುರುತಿಸಲಾಯಿತು.

ಆ ದಿನ ಜಮೀನಿನಲ್ಲಿ ಬಂದು ನನ್ನ ಜೊತೆ ಜಗಳ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ 3ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

1 ಮತ್ತು 2 ನೇ ಆರೋಪಿ ಗೈರುಹಾಜರಾಗಿದ್ದು ಸದರಿ ಆರೋಪಿ ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>**

ಆರೋಪಿತರು ನಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿರುತ್ತಾರೆಂದರೆ ನಿಜ. ಆರೋಪಿತರು ನನಗೆ ತಾವು ರಕ್ಷಣಾ ವೇದಿಕೆ ಅಧ್ಯಕ್ಷರು ಇದ್ದೀವಿ ನಾವೇನು ಮಾಡಿದರೂ ಯಾರೂ ಕೇಳಲ್ಲ ಎಂದು ಹೇಳಿ ನನಗೆ ಅವಾಚ್ಯ ನಿಂದಿಸಿರುತ್ತಾರೆಂದರೆ ನಿಜ. ಆರೋಪಿತರು ನನಗೆ ಅಕ್ರಮವಾಗಿ ತಡೆದು ಅಕ್ರಮ ಪ್ರತಿಬಂಧನವನ್ನುಂಟು ಮಾಡಿರುತ್ತಾರೆಂದರೆ ನಿಜ.

**<u>ಪಾಟಿ ಸವಾಲುಃ ಆರೋಪಿತರ ಪರ ಶ್ರೀ ಎಸ್.ಬಿ.ವೈ. ವಕೀಲರಿಂದಃ</u>**

ಸ.ನಂ.104ರ ಜಮೀನು ಮೂಲತಃ ನಮಗೆ ಸೇರಿದ್ದು ಎಂದರೆ ನಿಜ. ಸದರಿ ಜಮೀನನ್ನು ನನ್ನ

ಹಿರಿಯರು ಗುಂಡಪ್ಪ ಗುತ್ತೇದಾರರವರಿಗೆ ಮಾರಾಟ ಮಾಡಿರುತ್ತಾರೆಂದರೆ ನಿಜ. ಸದರಿ ಗುಂಡಪ್ಪ ಗುತ್ತೇದಾರರವರಿಂದ ಸದರಿ ಜಮೀನನ್ನು ಶಂಕರಗೌಡ ಖರೀದಿ ಮಾಡಿರುತ್ತಾರೆಂದರೆ ನಿಜ. ಸದರಿ ಜಮೀನಿಗೆ ನಮ್ಮ ಜಮೀನಿನ ಮೂಲಕವೇ ದಾರಿ ಇತ್ತು ಎಂದರೆ ಸಾಕ್ಷಿ ಕಾಲು ದಾರಿ ಇತ್ತು ಎಂದು ನುಡಿಯುತ್ತಾರೆ. ಸದರಿ ದಾರಿ ವಿಚಾರವಾಗಿ ನ್ಯಾಯಾಲಯದಲ್ಲಿ ಸಿವಿಲ್ ವ್ಯಾಜ್ಯ ನಡೆದಿದೆ ಎಂದರೆ ನಿಜ. ಆರೋಪಿತರಿಗೆ ತೊಂದರೆ ನೀಡಿದರೆ ಸದರಿ ಜಮೀನನ್ನು ನಮಗೆ ಮಾರಾಟ ಮಾಡಬಹುದು ಎಂದು ಭಾವಿಸಿ ಈ ಸುಳ್ಳು ದೂರು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಹೊಲದಲ್ಲಿಯೇ ವಾಸವಾಗಿರುತ್ತೇನೆ. ಹೊಲದಲ್ಲಿ ನಾನು ಮತ್ತು ನನ್ನ ಹೆಂಡತಿ ವಾಸವಾಗಿದ್ದೇವೆ. ನನ್ನ ಮಕ್ಕಳು ವಾರಕ್ಕೊಮ್ಮೆ ಬರುತ್ತಾರೆ.

ನನಗೆ ಹೊಡೆಯಲು ಆರೋಪಿತರಲ್ಲಿ ಮೊದಲು ಯಾರು ಬಂದಿರುತ್ತಾರೆಂದರೆ ಸಾಕ್ಷಿ ಎಲ್ಲರೂ ಒಟ್ಟಿಗೆ ಬಂದಿರುತ್ತಾರೆಂದು ನುಡಿಯುತ್ತಾರೆ. ನನಗೆ ಹೊಡೆಯಲು ಒಟ್ಟು ನಾಲ್ಕು ಜನ ಬಂದಿರುತ್ತಾರೆ. ಆರೋಪಿತರು ನನಗೆ ಕೈಯಿಂದ ಹೊಡೆದಿರುತ್ತಾರೆ ಹಾಗೂ ನೆಲಕ್ಕೆ ಹಾಕಿ ಒದ್ದಿರುತ್ತಾರೆ. ಯಾರು ಹೊಡೆದಿರುತ್ತಾರೆ ಹಾಗೂ ಯಾರು ನೆಲಕ್ಕೆ ಹಾಕಿ ಒದ್ದಿರುತ್ತಾರೆಂದರೆ ಸಾಕ್ಷಿ ನೆಲಕ್ಕೆ ಬಿದ್ದ ಮೇಲೆ ಹೇಗೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ.

ಜಗಳ ಎಷ್ಟು ಸಮಯದವರೆಗೆ ನಡೆದಿರುತ್ತದೆ ಎನ್ನುವುದು ಗೊತ್ತಿಲ್ಲ. ಟ್ರ್ಯಾಕ್ಟರ್ ಹಿಂಬದಿಯಿಂದ ಕಂಬಗಳನ್ನು ಒಡೆದಿರುತ್ತಾರೆ. ಟ್ರ್ಯಾಕ್ಟರ್ ಹಿಂಬದಿಯಿಂದ ಕಂಬಗಳನ್ನು ಒಡೆದಿರುತ್ತಾರೆಂದು ದೂರಿನಲ್ಲಿ ಬರೆಯಿಸಿರುತ್ತೇನೆ.

ಜಗಳ ಆಗಿಲ್ಲ ಆರೋಪಿತರು ನನಗೆ ಹೊಡೆದಿಲ್ಲ ಬೈದಿಲ್ಲ ನನ್ನನ್ನು ತಡೆಗಟ್ಟಿಲ್ಲ ಎಂದರೆ ಸರಿಯಲ್ಲ. ಜಗಳವನ್ನು ನನ್ನ ಹೆಂಡತಿ ಬಿಡಿಸಿರುತ್ತಾಳೆ. ನನ್ನ ಹೆಂಡತಿ ಜಗಳ ಬಿಡಿಸಿರುತ್ತಾಳೆಂದು ದೂರಿನಲ್ಲಿ ನಮೂದಿಸಿರುತ್ತೇನೆ.

ಜಗಳದ ಸಮಯದಲ್ಲಿ ಬಟ್ಟೆಗೆ ರಕ್ತ ಹತ್ತಿತ್ತೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗೆ ಹೋಗಿಲ್ಲ ಮನೆಯಲ್ಲೇ ಔಷಧಿ ಮಾಡಿಕೊಂಡಿರುತ್ತೇನೆ. ದೂರನ್ನು ನನ್ನ ಮಕ್ಕಳು ನೀಡಿರುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಒಡೆದ ಕಂಬಗಳನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಆರೋಪಿತರು ನಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ ಕಂಬ ಒಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಿದರೆ ತಮ್ಮ ಜಮೀನನ್ನು ನಮಗೆ ಮಾರಾಟ ಮಾಡಬಹುದು ಎಂದು ಭಾವಿಸಿ ಅವರ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ ಸ್ಥಳಕ್ಕೆ ಬಂದಿಲ್ಲ ಹಾಗೂ ನಾನು ಅದನ್ನು ನೋಡಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಾವು ರಕ್ಷಣಾ ವೇದಿಕೆ ಅಧ್ಯಕ್ಷರಿದ್ದು ನಿನ್ನನ್ನು ಹೂತು ಹಾಕಿದರೂ ಯಾರು ಕೇಳುವುದಿಲ್ಲ ಎಂದು ಬೆದರಿಕೆ ಹಾಕಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆ ಬಡಿ ಮಾಡಿ ನೆಲಕ್ಕೆ ಕೆಡುವಿ ಒದ್ದಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರಗಿ